ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಪ್ರಾಂಶುಪಾಲರ ನೇಮಕಾತಿ

21 (506) : ಶ್ರೀ ಗಡ್ಡದೇವರಮಠ ಗದ್ದಯ್ಯ ಶಿವಮೂರ್ತಯ್ಯ (ಶಿರಹಟ್ಟಿ) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ಯಾಕ್‌ಲಾಗ್ ಪ್ರಾಂಶುಪಾಲರ ಹುದ್ದೆಗಳ ನೇಮಕಾತಿಯು ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಡೆದಿದೆಯೇ;

ಆ) ಎಷ್ಟು ಕಾಲೇಜುಗಳಲ್ಲಿ ನಡೆದಿದೆ; ಕಳೆದ ಮೂರು ವರ್ಷಗಳ ವಿವರ ನೀಡುವುದು;

ಇ) ಬ್ಯಾಕ್‌ಲಾಗ್ ಪ್ರಾಂಶುಪಾಲರ ಹುದ್ದೆಗಳನ್ನು ತುಂಬಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಯಾವುವು?

ಡಾ: ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು) :

ಅ) ಮೀಸಲಾತಿ ಮತ್ತು ಬ್ಯಾಕ್‌ಲಾಗ್ ತುಂಬುವಿಕೆಯನ್ನು ಪ್ರಾಂಶುಪಾಲರು ಗ್ರೇಡ್-1 ಹುದ್ದೆಗಳ ತುಂಬುವಿಕೆಗೆ ಅನ್ವಯಿಸಲಾಗುತ್ತಿದೆ. ಮಂಡಳಿಯು ದಿನಾಂಕ 13.12.2002ರ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂಬ ಆದೇಶದಿಂದಾಗಿ ಪದೋನ್ನತಿಗಳು ಆಗಿರುವುದಿಲ್ಲ.

ಆ) ಯಾವುದೂ ಇಲ್ಲ.

ಇ) ಪದೋನ್ನತಿಗಳನ್ನು ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮಾಡಬೇಕಾಗಿದೆ.

ನಾಗಮಂಗಲ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಸಿಬ್ಬಂದಿ

23 (117) : ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಮಂಜೂರಾದ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಷ್ಟು; ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಭರ್ತಿ ಮಾಡಲು ಕ್ರಮವೇನು;

ಆ) ರಾಜ್ಯದಲ್ಲಿ ಹಿರಿಯ ಹಾಗೂ ಕಿರಿಯ ಸಹಾಯಕರು ಹಾಗೂ ಇತರೆ ಸಿಬ್ಬಂದಿವರ್ಗದವರ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತ ತಲುಪಿದ್ದು, ಆಯ್ಕೆಯಾದ ಅಭ್ಯರ್ಥಿಗಳಿಗೆ ಯಾವಾಗ ನೇಮಕಾತಿ ಆದೇಶ ನೀಡಲಾಗುವುದು;

ಇ) ನಾಗಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಎಕ್ಸ್‌ರೇ ಹಾಗೂ ರಕ್ತ ಪರೀಕ್ಷೆಗೆ ಉಪಕರಣಗಳು ಇದ್ದು ಎಕ್ಸ್‌ರೇ ಟೆಕ್ನೀಷಿಯನ್ ಹಾಗೂ ಲ್ಯಾಬ್ ಟೆಕ್ನೀಷಿಯನ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಕ್ರಮವೇನು;

ಈ) ನಾಗಮಂಗಲ ತಾಲ್ಲೂಕಿನ ಕಾಳಿಂಗನಹಳ್ಳಿ ಹಾಗೂ ಹೊನ್ನಾವರ ಗ್ರಾಮಪಂಚಾಯಿತಿ ಕೇಂದ್ರಗಳಾಗಿದ್ದು, ಈ ಪಂಚಾಯಿತಿ ವ್ಯಾಪ್ತಿಗೆ ಸೇರುವ ಸಾರ್ವಜನಿಕರಿಗೆ ಆರೋಗ್ಯ ಚಿಕಿತ್ಸೆಗೆ ತುಂಬಾ ತೊಂದರೆಯಾಗಿರುವುದರಿಂದ ಈ ಗ್ರಾಮಪಂಚಾಯತಿಗಳ ಕೇಂದ್ರ ಸ್ಥಾನದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯಲು ಇಲಾಖೆಯ ಮುಂದೆ ಪ್ರಸ್ತಾವನೆ ಇದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ನಾಗಮಂಗಲ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ 39 ಹುದ್ದೆಗಳು ಮಂಜೂರಾಗಿರುತ್ತದೆ. 31 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ 8 ಹುದ್ದೆಗಳು ಕೊರತೆ ಇರುತ್ತದೆ.

ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ:

ವೈದ್ಯರು	–	2
ಕ್ಷ – ಕಿರಣ ತಂತ್ರಜ್ಞರು	–	1
ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	–	2
ಗ್ರೂಪ್ ಡಿ	–	3

ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಹೊಸದಾಗಿ ವೈದ್ಯರುವಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುವುದರಿಂದ ನೇಮಕಾತಿ ಆದೇಶ ಹೊರಡಿಸುವಾಗ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಖಾಲಿ ಇರುವ ಕ್ಷ – ಕಿರಣ ತಂತ್ರಜ್ಞರ ಹುದ್ದೆಯನ್ನು ವಿಶೇಷ ನೇರನೇಮಕಾತಿ ಮೂಲಕ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಚಾರ ಪಡಿಸಲಾಗಿದೆ. ಅಂತಿಮ ಆಯ್ಕೆಪಟ್ಟಿ ಪ್ರಕಟಿಸಿದ ಕೂಡಲೇ ನೇಮಕ ಮಾಡಲಾಗುವುದು.

ಕಿರಿಯ ಮಹಿಳಾಆರೋಗ್ಯ ಸಹಾಯಕಿಯರ ತರಬೇತಿ ಮುಗಿದ ನಂತರ ಹುದ್ದೆಗಳನ್ನು ಕುಡಲೇ ಭರ್ತಿ ಮಾಡಲಾಗುವುದು.

ಆ) ಕಿರಿಯ ಆರೋಗ್ಯ ಸಹಾಯಕರ ಹಾಗೂ ಇತರೆ ಸಿಬ್ಬಂದಿ ವರ್ಗದವರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಈಗಾಗಲೇ ಪ್ರಚಾರ ಪಡಿಸಲಾಗಿದೆ. ಸದ್ಯದಲ್ಲಿಯೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶ ನೀಡಲಾಗುವುದು.

ಇ) ಲ್ಯಾಬ್ ಟೆಕ್ನೀಷಿಯನ್ನರ ಹುದ್ದೆಗಳು ಕೊರತೆ ಇರುವುದಿಲ್ಲ. ಆದರೆ ಎಕ್ಸರೇ ಟೆಕ್ನೀಷಿಯನ್ ಹುದ್ದೆಗಳ ಕೊರತೆ ಮಾತ್ರ ಇದ್ದು ಈ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಸಮಿತಿ ಮುಖಾಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು, ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿದ ನಂತರ ಭರ್ತಿ ಮಾಡಲಾಗುವುದು.

ಈ) ಇಲ್ಲ.

ಪ್ರಾಥಮಿಕ ಶಿಕ್ಷಣ ಪಠ್ಯ ಪುಸ್ತಕಗಳ ಬದಲಾವಣೆ

24 (226) : ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಾಥಮಿಕ ಶಿಕ್ಷಣ ಪಠ್ಯಪುಸ್ತಕ ಬದಲಾವಣೆಗೆ ಸರ್ಕಾರ ಚಿಂತನೆ ನಡೆಸಿದೆಯೆ;

ಆ) ಇದರ ರೂಪುರೇಷೆಗಳು ಹಾಗೂ ಸಾದಕ – ಬಾದಕಗಳೇನು;

ಇ) ಇದು ಯಾವಾಗಿನಿಂದ ಜಾರಿಗೆ ಬರುತ್ತದೆ; ಎಷ್ಟನೇ ತರಗತಿಗೆ ಹೊಸ ಮಾದರಿ ಪಠ್ಯಪುಸ್ತಕ ರಚಿಸಲು ಯೋಜಿಸಿದೆ;

ಈ) ಇದನ್ನು ರಾಜ್ಯದ ಯಾವ ಜಿಲ್ಲೆಗಳ ಎಷ್ಟು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಗೊಳಿಸಲಾಗುತ್ತದೆ;

ಉ) ಪರಿಷ್ಕರಿರಣಾ ಸಲಹಾ ಸಮಿತಿಯಲ್ಲಿ ಇರುವವರು ಯಾರು? ಪಠ್ಯಪುಸ್ತಕ ರಚನೆ ಯಾರಿಗೆ ವಹಿಸಲಾಗಿದೆ; (ವಿವರ ಒದಗಿಸುವುದು)